| | | |
|---|---|---|
| **10** ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ | | |
| ಸಿಸಿ ನಂ**. 55289/2025** | | |
| | ಪ್ರಾ.ಸಾ.1 | ಚಾ.ಸಾ.1 |
| ಹೆಸರು | ಸಂಪತ್ | |
| ತಂದೆ ಹೆಸರು | ಪಚ್ಚಪ್ಪ | |
| ವಯಸ್ಸು | 58 ವರ್ಷ | |
| ಕೆಲಸ | ಕಾರ್ಪೆಂಟರ್ | |
| ವಿಳಾಸ | ಹಳೇ ಬಾಗಲೂರು , ಬೆಂಗಳೂರು | |
| ದಿಃ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಆರೋಪಿತರ ಪರಿಚಯವಿರುತ್ತದೆ. ಅವರು ನನ್ನ ಅಳಿಯನ ಸಂಬಂಧಿಕರು. ಚಾ.ಸಾ.2 ಮತ್ತು 3 ರವರು ನನ್ನ ಮಗಳು ಮತ್ತು ಅಳಿಯ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಜಗಳವಾಗಿರುವುದಿಲ್ಲ. ಆರೋಪಿತರು ನನಗೆ ಕೈಗಳಿಂದ ಅಥವಾ ಕೀ ಚೈನಿನಿಂದ ಹಲ್ಲೆ ಮಾಡಿರುವುದಿಲ್ಲ, ಅವರು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ . ನಾನು ಆರೋಪಿತರ ವಿರುದ್ಧ ಯಾವುದೇ ದೂರು ನೀಡಿರುವುದಿಲ್ಲ.

ಸಾಕ್ಷಿಯು ದೂರು ಮತ್ತು ಅದರ ಮೇಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದಾರೆ. ಆದ್ದರಿಂದ ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ಮೇಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದಾರೆ. ಆದ್ದರಿಂದ ಸ್ಥಳ ಪಂಚನಾಮೆಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಏನು ಬರೆದಿರುತ್ತದೆ ಎಂದು ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಹಿ.ಸ.ಸ.ಅ ರವರಿಂದಃ**

ದಿಃ 19.03.2024 ರಂದು ಬೆಳಗ್ಗೆ 9.45 ಗಂಟೆಗೆ ಆರೋಪಿತರು ಚಾ.ಸಾ,2 ರವರೊಂದಿಗೆ ಗಲಾಟೆ ಮಾಡುತ್ತಿದ್ದಾಗ ನಾನು ಗಲಾಟೆ ಮಾಡಬೇಡಿ ಎಂದು ಆರೋಪಿತರಿಗೆ ಹೇಳಿದ್ದಕ್ಕೆ ಅವರು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಕೀ ಚೈನು ತೆಗೆದುಕೊಂಡು ನನ್ನ ತಲೆಗೆ ಹೊಡೆದು ಕೈಯಿಂದ ಬೆನ್ನಿಗೆ ಮತ್ತು ಮೈಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿಪಿ.1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಗಲಾಟೆ ಬಗ್ಗೆ ನಾನು ಪೊಲೀಸರಿಗೆ ದಿಃ 20.03.2024 ರಂದು ಸ್ಥಳ ತೋರಿಸಿಕೊಟ್ಟಿದ್ದು ಸದರಿ ಸ್ಥಳದಲ್ಲಿ ಪೊಲೀಸರು ನಿಪಿ.2 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವು ರಾಜಿ ಮಾಡಿಕೊಂಡಿರುವ ಕಾರಣ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಇಲ್ಲ ಎಂದು ನುಡಿಯುತ್ತಾರೆ.

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಲಾಗಿ ಸಾಕ್ಷಿಯು ಸರಿ ಇದೆ ಎಂದು ಒಪ್ಪಿ ದ್ದಾರೆ.

**10 ನೇ ಎಸಿಎಂಎಂ ನ್ಯಾಯಾಲಯ, ಬೆಂಗಳೂರು**